# ‘ರಿಡಲ್ ಆಫ್ ಕಲರ್ಸ್’
# ಭಿನ್ನ ಕಲಾಭಿವ್ಯಕ್ತಿ


ಅವಿನಾಶ್ ಗೋಂದಾಲಿಯಾ


ಅವಿನಾಶ್ ಗೋಂದಾಲಿಯಾ ಕೃತಿ


ಸುಚಿತ್ ನಾಹನಿ ಕೃತಿ

■ ಚಿತ್ರ–ಲೇಖನ: **ದಿಲ್**

**ಮ**ನುಷ್ಯ ಮತ್ತು ಮಷೀನ್ ನಡುವೆ ಹೆಚ್ಚೇನೂ ವ್ಯತ್ಯಾಸವಿಲ್ಲ. ಹೀಗೆಂದಾಗ ಇದೊಂದು ವಿಡಂಬನೆ. ಹಾಗೆ ನೋಡಿದರೆ ಮನುಷ್ಯನ ಪ್ರತಿ ಅಂಗ ಯಂತ್ರದಂತೆಯೇ ಕೆಲಸ ಮಾಡುತ್ತದೆ ಎಂದು ಅರ್ಥೈಸಿದಲ್ಲಿ ಅದೊಂದು ಪ್ರತಿಪಾದನೆ. ಮನುಷ್ಯನ ಮೆದುಳಿನಲ್ಲಿ ಮತ್ತು ಒಂದು ಗಡಿಯಾರದ ಮಷೀನ್‌ನಲ್ಲಿ ಇರುವ ಇತರ ಉಪಕರಣಗಳು ತಂತಮ್ಮ ಕೆಲಸಗಳನ್ನು ನಿರ್ವಹಿಸಿದಾಗಲೇ ಚಲನೆ ಸಾಧ್ಯ.

ಕೀಲಿ ಕೊಟ್ಟರೆ ಹೇಗೆ ಗಡಿಯಾರದ ಮಷೀನ್‌ಗೆ ಚಾಲನೆಯೋ, ಹಾಗೆಯೇ ಮನುಷ್ಯನ ಮೆದುಳು ಒಂದು ಮಷೀನ್ ಎಂದು ಭಾವಿಸಿದರೆ ವಿಚಾರ ಕೀಲಿ ಕೈ ಇದ್ದಂತೆ. ‘ಅಕಲ್ ಕಾ ತಾಲಾ ಖೋಲೋ..’ (ಬುದ್ಧಿಯ ಬೀಗ ಬಿಚ್ಚು) ಎನ್ನುತ್ತಾರಲ್ಲ, ಹಾಗೆ ಬುದ್ಧಿಯ ಬೀಗ ಬಿಚ್ಚಿದಾಗಲೇ ಮೆದುಳಿನ ಅಂಗಗಳು ಚಲನಶೀಲತೆ ಪಡೆದುಕೊಳ್ಳುವುದು.

ಇಂಥ ಜಿಜ್ಞಾಸೆಗಳನ್ನು ಕಲೆಯ ಮೂಲಕ ಹೇಳುವ ಪ್ರಯತ್ನ ಕಲಾವಿದ ಅವಿನಾಶ್ ಗೋಂದಾಲಿಯಾ ಅವರದು. 21ನೇ ಶತಮಾನದ ಮನುಷ್ಯನ

(8ನೇ ಪುಟ ನೋಡಿ)